ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ : ಎಡಿಎಂ2(4):ಶಾ.ಪ್ರಾ:01:2020-21

ದಿನಾಂಕ : 01.06.2020

<u>ಶಾಲೆಗಳನ್ನು ಪುನರಾರಂಭಿಸುವ / ದಾಖಲಾತಿ ಪ್ರಾರಂಭಿಸುವ ಬಗ್ಗೆ</u>

<u>ಖಾಸಗಿ ಅನುದಾನರಹಿತ ಶಾಲೆಗಳಿಗೆ ಸುತ್ತೋಲೆ</u>

ವಿಷಯ : ಖಾಸಗಿ ಅನುದಾನರಹಿತ ಶಾಲೆಗಳನ್ನು ಪುನರಾರಂಭಿಸುವ ಕುರಿತು ಅಭಿಪ್ರಾಯ ಸಂಗ್ರಹಿಸುವ ಬಗ್ಗೆ

ಉಲ್ಲೇಖ : ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಆದೇಶ ಸಂಖ್ಯೆ : **No. 40-3/2020-DM-I(A), dated : 30.05.2020**

---

ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಕೋವಿಡ್-19 ನಿಯಂತ್ರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಹೊರಡಿಸಿರುವ ಕೆಲವೊಂದು ನಿರ್ಬಂಧಗಳನ್ನು ಹಂತಹಂತವಾಗಿ ಸಡಿಲಿಸಿ ಪರಿಷ್ಕೃತ ಮಾರ್ಗಸೂಚಿಯನ್ನು ದಿನಾಂಕ : 30.05.2020 ರಂದು ಪ್ರಕಟಿಸಿದೆ.

ಸದರಿ ಮಾರ್ಗಸೂಚಿಯಲ್ಲಿ ಶಾಲೆಗಳು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಪುನರಾರಂಭ ಮಾಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಈ ಕೆಳಕಂಡಂತೆ ಸೂಚಿಸಿರುತ್ತದೆ :

***"Schools, Colleges, Educational / Training / Coaching Institutions, etc., will be opened after consultation with States and UT's. State Governments / UT Administrations may hold consultations at the Institution level with parents and other stakeholder. Based on the feedback, a decision on the re-opening of these institutions will be taken in the month of July 2020"***

ಈ ಸಂಬಂಧ ದಿನಾಂಕ : 01.06.2020 ರಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ – ಕರ್ನಾಟಕ ಮತ್ತು ಇತರೆ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಸಭೆಯನ್ನು ನಡೆಸಲಾಯಿತು.

Scanned with CamScanner

ರಾಜ್ಯದಲ್ಲಿ ಶಾಲೆಗಳನ್ನು ಹಂತ ಹಂತವಾಗಿ ಪುನರಾರಂಭಿಸುವುದಕ್ಕೆ ಸಂಬಂಧಿಸಿದಂತೆ ಪೋಷಕರ ಮತ್ತು ಸಂಬಂಧಿಸಿದ ಪಾಲುದಾರರ (stake holders) ಸಭೆಯನ್ನು ಆಯೋಜಿಸುವಂತೆ ಮೇಲ್ಕಂಡ ಸಭೆಯಲ್ಲಿ ತೀರ್ಮಾನಿಸಲಾಯಿತು.

ರಾಜ್ಯದಲ್ಲಿ ಶಾಲೆಗಳನ್ನು ಹಂತ ಹಂತವಾಗಿ ಈ ಕೆಳಕಂಡಂತೆ ಪುನರಾರಂಭಿಸಲು ಉದ್ದೇಶಿಸಲಾಗಿದೆ :

| ಕ್ರಮ ಸಂಖ್ಯೆ | ತರಗತಿ | ಶಾಲೆಗಳನ್ನು ಪುನರಾರಂಭಿಸಲು ಪ್ರಸ್ತಾಪಿಸಿರುವ ದಿನಾಂಕ | ಷರಾ |
|---|---|---|---|
| 01 | 4 ರಿಂದ 7ನೇ ತರಗತಿ | 01.07.2020 | – |
| 02 | 1 ರಿಂದ 3ನೇ ತರಗತಿ | 15.07.2020 | – |
| 03 | 8 ರಿಂದ 10ನೇ ತರಗತಿ | 15.07.2020 | ದಿನಾಂಕ : 25.06.2020 ರಿಂದ 4.7.2020 ರವರೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆ ಮತ್ತು ಉತ್ತರ ಪತ್ರಿಕೆ ಮೌಲ್ಯಮಾಪನ ಕಾರ್ಯ ನಡೆಯುವ ಕಾರಣ |
| 04 | ಪೂರ್ವ–ಪ್ರಾಥಮಿಕ ತರಗತಿ | 20.07.2020 | – |

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಖಾಸಗಿ ಅನುದಾನ ರಹಿತ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರುಗಳು ಪೋಷಕರು (Parent Teacher Meeting) ಹಾಗೂ ಎಸ್.ಎಂ.ಸಿ. (School Management Committee) ಸದಸ್ಯರುಗಳನ್ನು ಸಭೆಗೆ ಆಹ್ವಾನಿಸಿ ಈ ಕೆಳಕಂಡ ಅಂಶಗಳ ಕುರಿತು ಅವರ ಅಭಿಪ್ರಾಯವನ್ನು ಪಡೆಯುವುದು.

| ಕ್ರಮ ಸಂಖ್ಯೆ | ಅಭಿಪ್ರಾಯ ನೀಡಬೇಕಾದ ವಿಷಯ | ಅಭಿಪ್ರಾಯ |
|---|---|---|
| 01 | ಶಾಲೆಗಳನ್ನು ಮೇಲೆ ಪ್ರಸ್ತಾಪಿಸಿರುವ ದಿನಾಂಕಗಳಂದು ಪುನರಾರಂಭ ಮಾಡುವ ಕುರಿತು ಅಭಿಪ್ರಾಯ | |

Scanned with CamScanner

| | | |
|---|---|---|
| 02 | ಬಹುತೇಕ ಸದಸ್ಯರುಗಳ ಅಭಿಪ್ರಾಯಗಳು ಮೇಲ್ಕಂಡ ದಿನಾಂಕಗಳಿಗೆ ಪೂರಕವಾಗಿ ಇಲ್ಲದೇ ಇದ್ದಲ್ಲಿ, ಶಾಲೆಯನ್ನು ಪುನರಾರಂಭ ಮಾಡಲು ಸಭೆಯು ಪ್ರಸ್ತಾಪಿಸಿರುವ ದಿನಾಂಕಗಳು | |
| 03 | ಸಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಬಗ್ಗೆ ಸಭೆಯಲ್ಲಿ ಈ ಕೆಳಕಂಡ ಯಾವ ಮಾದರಿಯನ್ನು ಅಳವಡಿಸಲು ಒಪ್ಪಿರುತ್ತದೆ: | |
| | <u>**ಮಾದರಿ–1**</u>: ಪ್ರಸ್ತುತ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಎಂದಿನಂತೆ ತರಗತಿಗಳನ್ನು ನಡೆಸುವ ಬಗ್ಗೆ | |
| | <u>**ಮಾದರಿ–2:**</u> ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪಾಳಿ ಪದ್ಧತಿಯಲ್ಲಿ ಅಂದರೆ 2 ಪಾಳಿಗಳಲ್ಲಿ ವಿಂಗಡಿಸಿ, ಬೆಳಿಗ್ಗೆ : 8:00 ರಿಂದ ಮಧ್ಯಾಹ್ನ : 12:00 ಗಂಟೆಯವರೆಗೆ ಮೊದಲನೇ ಪಾಳಿ ಹಾಗೂ ಮಧ್ಯಾಹ್ನ : 1:00 ಗಂಟೆಯಿಂದ ಸಂಜೆ : 5:00 ಗಂಟೆಯವರೆಗೆ ಎರಡನೇ ಪಾಳಿಯಲ್ಲಿ ಶಾಲೆಗಳನ್ನು ನಡೆಸುವ ಬಗ್ಗೆ | |
| | <u>**ಮಾದರಿ–3:**</u> ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಾಲೆಯ ಒಟ್ಟು ತರಗತಿಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಿ, ದಿನ ಬಿಟ್ಟು ದಿನ ಶಾಲೆಯನ್ನು ನಡೆಸುವ ಬಗ್ಗೆ (ಉದಾ : 1 ರಿಂದ 5ನೇ ತರಗತಿವರೆಗೆ ಒಂದು ದಿನ, 6 ರಿಂದ 10ನೇ ತರಗತಿವರೆಗೆ ಮತ್ತೊಂದು ದಿನ) | |
| | ಮೇಲಿನ ಮೂರು ಮಾದರಿಗಳಲ್ಲಿ ಯಾವುದೇ ಮಾದರಿ ಒಪ್ಪಲಾಗದಿದ್ದಲ್ಲಿ ಸಭೆಯು ಪ್ರಸ್ತಾಪಿಸುವ ಮಾದರಿ | |
| 05 | ಶಾಲೆಯಲ್ಲಿ ಸುರಕ್ಷತಾ ದೃಷ್ಟಿಯಿಂದ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಸಲಹೆ/ಅಭಿಪ್ರಾಯಗಳು | |

Scanned with CamScanner

ಈ ಮೇಲ್ಕಂಡ ಪೂರ್ವಸಿದ್ಧತಾ ಕ್ರಮಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಪೂರಕ ಸಿಬ್ಬಂದಿಗಳು ದಿನಾಂಕ : 05.06.2020 ರಿಂದ ಶಾಲೆಗೆ ಹಾಜರಾಗಿ, ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳುವುದು :

| | |
|---|---|
| ದಿನಾಂಕ : 8.6.2020 ರಿಂದ | ಶಾಲಾ ದಾಖಲಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುವುದು |
| ದಿನಾಂಕ : 10.6.2020 ರಿಂದ 12.06.2020 | ಪೋಷಕರು (Parent Teacher Meeting) ಹಾಗೂ ಎಸ್.ಎಂ.ಸಿ. (School Management Committee) ಸದಸ್ಯರುಗಳ ಸಭೆಗಳನ್ನು ಆಯೋಜಿಸಿ, ಶಾಲೆಯ ಪುನರಾರಂಭದ ದಿನಾಂಕದ ಬಗ್ಗೆ ನಿರ್ಣಯಗಳನ್ನು ಸಂಗ್ರಹಿಸಿ, ಅವುಗಳನ್ನು ದಿನಾಂಕ : 15.06.2020ರೊಳಗೆ SATS ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು. |

1/6/20

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ :

1) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಜಿಲ್ಲಾ ಉಪನಿರ್ದೇಶಕರುಗಳ ಮುಖಾಂತರ)
3) ರಾಜ್ಯದ ಎಲ್ಲಾ ಶಾಲಾ ಮುಖ್ಯೋಪಾಧ್ಯಾಯರುಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

Scanned with CamScanner